ಎದ್ದೇಳು. ಸ್ವಲ್ಪ ಶಾಪಿಂಗ್ ಹೋಗಿ ಬರೋಣ..." ಎಂದೆ. "ಓಕೆ ಡಾರ್ಲಿಂಗ್..." ಎಂದು ನನ್ನನ್ನು ಹಿಂಬಾಲಿಸಿದಳು. ಪಾರ್ಕಿಂಗ್ ಲಾಟಿನಲ್ಲಿದ್ದ ಕಾರು ತೆಗೆದು ವಸುಂಧರೆಯ ಜೊತೆ ಹೊರಟೆ.

ಮೊಟ್ಟ ಮೊದಲನೆಯ ದಿನವೇ ವಸುಂಧರೆಯನ್ನು ಹೆಚ್ಚು ಜನಸಂದಣಿಯಿದ್ದ ಶಾಪಿಂಗ್ ಮಾಲುಗಳಿದ್ದ ಅಂಗಡಿಗಳಿಗೆ ಕರೆದುಕೊಂಡು ಹೋಗಲು ನನಗಿಷ್ಟವಿರಲಿಲ್ಲ. ಪ್ರೊಫೆಸರರ ಶರತ್ತುಗಳು ನನ್ನ ಕಿವಿಯಲ್ಲಿ ಗುಯ್‌ಗುಡುತ್ತಿದ್ದವು. ಎಂ.ಜಿ. ರಸ್ತೆಗೆ ತೆರಳಿ ಹೆಚ್ಚು ಜನರಿಲ್ಲದ ಒಂದು ಆಭರಣದ ಅಂಗಡಿಯೊಳಗೆ ವಸುಂಧರೆಯೊಂದಿಗೆ ಅಡಿಯಿಟ್ಟೆ. ಮನಸ್ಸಿನೊಳಗೆ ಆತಂಕವಂತೂ ಕಾಡುತ್ತಿತ್ತು. ಎರಡೂ ಕೈಗಳಿಗೆ ಒಂದೊಂದು ದಪ್ಪ ಬಂಗಾರದ ಬಳೆ, ಕುತ್ತಿಗೆಗೆ ಸಣ್ಣದೊಂದು ಸರ, ಕಿವಿಗಳಿಗೆ ಸಣ್ಣದಾದ ಓಲೆಗಳನ್ನು ವಸುಂಧರೆಯೇ ಆಯ್ಕೆ ಮಾಡಿ ಅವುಗಳನ್ನು ಖರೀದಿಸಿ ಹೊರಗೆ ಬಂದಾಗ ಮನಸ್ಸು ನಿರಾಳವಾಗಿತ್ತು. ವಸುಂಧರೆ ಎಲ್ಲೂ ಯಾರಿಗೂ ಅನುಮಾನ ಬರದಂತೆ ನಡೆದುಕೊಂಡಳು.

ಅಲ್ಲಿಂದ ಮುಂದೆ ನಡೆದು ಸಮೀಪದಲ್ಲಿದ್ದ, ಸಂಪೂರ್ಣವಾಗಿ ಖಾಲಿಯೇ ಇದ್ದ ಒಂದು ಬಟ್ಟೆ ಅಂಗಡಿಗೆ ವಸುಂಧರೆಯನ್ನು ಕರೆದುಕೊಂಡು ಹೋದೆ. ಅಲ್ಲಿ ಅವಳಿಗೆ ಬೇಕಾದ ಐದಾರು ಜೊತೆ ಚೂಡಿದಾರಗಳು, ನಾಲ್ಕೈದು ಜೊತೆ ಟೀ–ಶರ್ಟ್ ಜೀನ್ಸ್ ಪ್ಯಾಂಟುಗಳು, ಮೂರ್ನಾಲ್ಕು ನೈಟಿಗಳು, ಒಳಉಡುಪುಗಳನ್ನು ಖರೀದಿಸಿ ಹೊರ ಬಂದೆವು. ಎದುರಿನಲ್ಲಿ ಒಂದು ಕಾಸ್ಮೆಟಿಕ್ ಷೋರೂಮು ಕಾಣಿಸಿತು. ಒಳಗೆ ಹೋಗಿ ವಸುಂಧರೆಗೆ ಏನು ಬೇಕೋ ತೆಗೆದುಕೊಳ್ಳಬಹುದೆಂದು ಹೇಳಿ ನಿಂತೆ. ಅವಳು ಒಂದಷ್ಟು ಹಣೆಯ ಬಿಂದಿಗಳು, ಹೇರ್ ಬ್ಯಾಂಡುಗಳು, ನೇಲ್ ಪಾಲೀಷ್, ತುಟಿಯ ರಂಗು, ಐ ಲೈನರುಗಳನ್ನು ಆರಿಸಿಕೊಂಡಳು. ನನಗೆ ಆಶ್ಚರ್ಯವಾಯಿತು. ಆಕೆ ಹೆಚ್ಚು ಸಮಯ ತೆಗೆದುಕೊಳ್ಳದೆ ಒಮ್ಮೆ ದೃಷ್ಟಿ ಬೀರಿ ಎಲ್ಲವನ್ನೂ ಒಮ್ಮೆಲೇ ಪಟ್ಟಿ ಮಾಡಿ ಹೇಳಿದಳು!

ವಾಪಸು ಬರುವಾಗ ರಸ್ತೆಯಲ್ಲಿ ಕಾರು ನಿಲ್ಲಿಸಿ ದಿನಸಿ ಅಂಗಡಿಯೊಂದರಿಂದ ಮನೆಗೆ ಒಂದು ವಾರಕ್ಕೆ ಬೇಕಾದ ಎಲ್ಲಾ ದಿನನಿತ್ಯದ ಅಡುಗೆ ಪದಾರ್ಥಗಳನ್ನು, ಪಕ್ಕದ ಅಂಗಡಿಯಿಂದ ಒಂದಷ್ಟು ತರಕಾರಿಗಳನ್ನು ಖರೀದಿಸಿ ಕಾರಿನಲ್ಲಿ ತುಂಬಿಕೊಂಡೆ.

ನಾನು ಮತ್ತು ವಸುಂಧರೆ ಫ್ಲ್ಯಾಟು ತಲುಪಿದಾಗ ಸಂಜೆ ಐದು ಗಂಟೆಯಾಗಿತ್ತು. ಫ್ಲ್ಯಾಟಿನ ಒಳಗೆ ಅಡಿಯಿಡುತ್ತಲೇ ವಸುಂಧರೆಯನ್ನು ಸೋಫಾದ ಮೇಲೆ ಕುಳ್ಳಿರಿಸಿ ಹಣೆಗೆ ಬಿಂದಿಯನ್ನು ಇಟ್ಟು, ಕುತ್ತಿಗೆಗೆ ಸರವನ್ನು ಹಾಕಿ ಕೈಗಳಿಗೆ ಬಳೆ ತೊಡಿಸಿದೆ. ಓಲೆಗಳನ್ನು ಹಾಕಲು ಕಿವಿಯಲ್ಲಿ ತೂತುಗಳಿರಲಿಲ್ಲ. ನಾನೇ ತೂತು ಮಾಡಲು ಭಯವಾಯಿತು. ಪ್ರೊಫೆಸರರಿಗೆ ಫೋನು ಮಾಡಿ ವಿಷಯ ತಿಳಿಸಿದೆ. ಅವರಿಗೆ ಅದು ಇಷ್ಟವಾಗಲಿಲ್ಲ. "ವಿಶಾಲ್... ಅದೊಂದು ಯಂತ್ರವಷ್ಟೇ... ಅದಕ್ಕೆ ಅಲಂಕಾರ ಯಾಕೆ? ಬೇಡ..." ಎಂದು ಪಟ್ಟು ಹಿಡಿದರು. ಅವರನ್ನು ಒಪ್ಪಿಸಲು ನಾನು ಹರಸಾಹಸ ಮಾಡಬೇಕಾಯಿತು. ಕೊನೆಗೆ ತೆಗೆದುಕೊಂಡು ಬಾ ಎಂದರು.

ವಸುಂಧರೆಯನ್ನು ಪ್ರೊಫೆಸರರ ಮನೆಗೆ ಕರೆದುಕೊಂಡು ಹೋದಾಗ ಯಾಕೋ ಪ್ರೊಫೆಸರರು ಅನ್ಯಮನಸ್ಕರಾಗಿದ್ದರು. ಅವಳು "ಹಾಯ್ ಡ್ಯಾಡ್..." ಎಂದರೂ ಹೆಚ್ಚೇನೂ ಪ್ರತಿಕ್ರಿಯಿಸದೆ "ಹಾಯ್..." ಎಂದಷ್ಟೇ ಹೇಳಿ ಒಂದು ಸಣ್ಣ ಸೂಜಿಯಿಂದ ಆಕೆಯ ಕಿವಿಗಳಿಗೆ ತೂತು ಮಾಡಿದರು.

ನನಗೆ ಆಶ್ಚರ್ಯವಾದ ಸಂಗತಿಯೇನಂದರೆ ಕಿವಿ ಚುಚ್ಚುವಾಗ ವಸುಂಧರೆಯ ಮುಖದಲ್ಲಿ ನೋವಿನ ಛಾಯೆಯಿರಲಿಲ್ಲ. ವಸುಂಧರೆ ಯಾಂತ್ರಿಕವಾಗಿ ನಗಬಲ್ಲಳು... ಆದರೆ ಅಳಲಾರಳು... ಅವಳಿಗೆ ಸ್ಪರ್ಶ ಜ್ಞಾನವಿದೆ, ಆದರೆ ಮಾನವಸಹಜವಾದ ಸಂವೇದನೆಗಳಿಲ್ಲ ಎಂಬುದು ನನಗೆ ಖಾತರಿಯಾಯಿತು. ಕಿವಿಗೆ ಓಲೆ ಹಾಕಿಸಿ ಫ್ಲ್ಯಾಟಿಗೆ ಕರೆತಂದೆ.

ಹಣೆಗೆ ಬಿಂದಿ, ಕಿವಿಗೆ ಓಲೆ, ಕುತ್ತಿಗೆಯಲ್ಲಿ ಸರ, ಕೈಗಳಿಗೆ ಬಳೆ ಹಾಕಿದ ಮೇಲೆ ವಸುಂಧರೆ ಮತ್ತಷ್ಟು